ದಿನಾಂಕ 24.03.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನಾನು ಈಗ ಚನ್ನಪಟ್ಟಣದಲ್ಲಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಪ್ರಸ್ತುತ ನನಗೆ ಮಾಸಿಕ 25,000/- ರೂಗಳ ವರಮಾನವಿರುತ್ತದೆ.

2. ಅಪಘಾತದ ಸಮಯದಲ್ಲಿ ನನಗೆ ಒಟ್ಟು ಮಾಸಿಕ 35,000/- (ಗ್ರಾಸ್ ಸ್ಯಾಲರಿ) ರೂಗಳ ವರಮಾನವಿದ್ದು, ಪ್ರಸ್ತುತ ಮಾಸಿಕ 25,000/- (ಗ್ರಾಸ್ ಸ್ಯಾಲರಿ) ರೂಗಳ ವರಮಾನವಿರುತ್ತದೆ. ನನ್ನ ಮಾಸಿಕ ವರಮಾನದ ಸಂಬಂಧ ನಮ್ಮ ವಕೀಲರಿಗೆ ನನ್ನ ಪೇ-ಸ್ಲಿಪ್‌ಗಳನ್ನು ಕೊಟ್ಟಿರುತ್ತೇನೆ. ನನ್ನ ಮಾಸಿಕ ವರಮಾನ ನನ್ನ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದ್ದು, ನನ್ನ ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಸ್ಟೇಟ್‌ಮೆಂಟ್ ಇರುತ್ತದೆ. ಅವುಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅಪಘಾತವಾದ ನಂತರದ ಅವಧಿಯ ನನ್ನ ಸಂಬಳ ನನ್ನ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದ್ದು, ಅಪಘಾತವಾದ 3-4 ತಿಂಗಳು ನನ್ನ ಸಂಬಳ ಬಂದಿರುವುದಿಲ್ಲ. ಅಪಘಾತದ ಸಮಯದಲ್ಲಿ ನಾನು ಫಾರೆಸ್ಟ್ ಗಾರ್ಡ್ ಹುದ್ದೆಯಲ್ಲಿದ್ದು, ಈಗ ಬೀಟ್ ಫಾರೆಸ್ಟರ್ ಹುದ್ದೆಯಲ್ಲಿದ್ದೇನೆ. ಅಪಘಾತದ ಸಮಯದಲ್ಲಿ ನಾನು ನಿರ್ವಹಿಸುತ್ತಿದ್ದ ಕೆಲಸಕ್ಕೂ ಹಾಗೂ ಆ ನಂತರದಲ್ಲಿ ನಾನು ನಿರ್ವಹಿಸುತ್ತಿರುವ ಕೆಲಸಕ್ಕೂ ಯಾವುದೇ ರೀತಿಯ ವ್ಯತ್ಯಾಸ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಅಪಘಾತದ ಪೂರ್ವದಲ್ಲಿ ನಾನು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಲಾಗುತ್ತಿದ್ದು, ಈಗ ಅಷ್ಟು ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ

ಎಂದು ನುಡಿಯುತ್ತಾರೆ. ನನ್ನ ವೇತನ ಪ್ರಮಾಣದಲ್ಲಿ ಕಡಿಮೆಯಾಗಿದೆ ಎನ್ನುವುದನ್ನು ಸಾಬೀತುಪಡಿಸುವ ಸಂಬಂಧ ನಾನು ದಾಖಲೆ ಹಾಜರುಪಡಿಸಬಹುದು. ಅಪಘಾತವಾದ ನಂತರದಲ್ಲಿ ನನಗೆ 3 ತಿಂಗಳು ನನಗೆ ಸಂಬಳ ಬರಲಿಲ್ಲ ಎಂದು ಸಾಬೀತುಪಡಿಸುವ ಸಂಬಂಧ ನನ್ನ ಲೀವ್ ಸರ್ಟಿಫಿಕೇಟಿದ್ದು ಅದನ್ನು ಹಾಜರುಪಡಿಸಬಹುದು.

3. ನಮ್ಮ ಇಲಾಖೆಯಲ್ಲಿ ವೈದ್ಯಕೀಯ ಖರ್ಚುಗಳ ಮರುಪಾವತಿಯ ಸೌಲಭ್ಯವಿದೆ ಎನ್ನುವುದು ನಿಜ. ನನಗೆ ಆದಂತಹ ವೈದ್ಯಕೀಯ ಖರ್ಚುಗಳ ಸಂಬಂಧ ನಾನು ಇದುವರೆವಿಗೂ ನಮ್ಮ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ನಿಮ್ಮ ಇಲಾಖೆಯಲ್ಲಿ ವೈದ್ಯಕೀಯ ಖರ್ಚಿನ ಮರುಪಾವತಿಯ ಸಂಬಂಧ ಯಾವ ಕಾರಣಕ್ಕಾಗಿ ಅರ್ಜಿ ಸಲ್ಲಿಸಿಲ್ಲ? ಎಂದರೆ ಸಾಕ್ಷಿಯು ನನಗೆ ಇನ್ನೂ ಹುಷಾರಿಲ್ಲ ಎಂದು ನುಡಿಯುತ್ತಾರೆ. ಮುಂಬರುವ ದಿನಗಳಲ್ಲಿ ಕ್ಲೇಮ್ ಮಾಡುತ್ತೀರಾ? ಎಂದರೆ ಸಾಕ್ಷಿಯು ನೋಡಬೇಕು ಎಂದು ಉತ್ತರಿಸುತ್ತಾರೆ. ನಾನು ಇದುವರೆವಿಗೂ ನಮ್ಮ ಇಲಾಖೆಯಲ್ಲಿ ವೈದ್ಯಕೀಯ ಖರ್ಚುಗಳ ಮರುಪಾವತಿಗಾಗಿ ಅರ್ಜಿ ಸಲ್ಲಿಸಿಲ್ಲ ಎನ್ನುವ ಬಗ್ಗೆ ನಮ್ಮ ಇಲಾಖೆಯ ವತಿಯಿಂದ ದಾಖಲೆ ನೀಡುತ್ತಾರೆ ಎನ್ನುವುದು ನಿಜ. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

4. ನಾನು ಬಿ.ಕಾಂ., ಪದವೀಧರ. ನಿಪಿ-8 ರಲ್ಲಿ ಕಾಣಿಸಲಾದ 12,95,327/- ರೂಗಳನ್ನು ನಾನು ಆಸ್ಪತ್ರೆಯಲ್ಲಿದ್ದಾಗ ನಮ್ಮ ಇಲಾಖೆಯವರು ಪಾವತಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಂದೆ ತಾಯಿ ಅನಕ್ಷರಸ್ಥರಾಗಿದ್ದು ನಾವು ಸಾಲ ಮಾಡಿ ತಂದ ಹಣವನ್ನು

ನನ್ನ ತಂದೆ ತಾಯಿ ನಮ್ಮ ಇಲಾಖೆಯರಿಗೆ ಕೊಟ್ಟು ಅವರು ಸದರಿ ಹಣವನ್ನು ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-8 ಬಿಲ್ಲನ್ನು ಹೊರತುಪಡಿಸಿ ಹಣ ಸಂದಾಯ ರಶೀದಿ ಎಂಬ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಿಪಿ-8 ರ ನಕಲು ಪ್ರತಿಯನ್ನು ಹಾಗೂ ಹಣ ಸಂದಾಯ ರಶೀದಿಗಳನ್ನು ನಾನು ನಮ್ಮ ಇಲಾಖೆಗೆ ಸಲ್ಲಿಸಿರುತ್ತೇನೆ. ನಾನು ಹೇಳಿದಂತೆ ನನ್ನ ತಂದೆ ತಾಯಿ ನಮ್ಮ ಇಲಾಖೆಯ ಸಿಬ್ಬಂದಿಗಳಿಗೆ ಹಣವನ್ನು ಕೊಟ್ಟಿದ್ದಾರೆಂದು ಹೇಳಿರುವ ಸಂಬಂಧ ದಾಖಲೆ ಇರುವುದಿಲ್ಲ.

5. ಅಪಘಾತ ಸಂಭವಿಸಿರುವುದು ರಸ್ತೆಯ ಮಧ್ಯಭಾಗದಲ್ಲಿ ಎನ್ನುವುದು ನಿಜ. ಅಪಘಾತವು ಮುಖಾಮುಖಿಯಾಗಿ ಸಂಭವಿಸಿರುವುದು ಎನ್ನುವುದು ನಿಜ. ನಾನು ಪ್ರಯಾಣಿಸುತ್ತಿದ್ದ ಮೋಟಾರ್ ಸೈಕಲ್ ನಮ್ಮ ಇಲಾಖೆಗೆ ಸೇರಿದ್ದು. ನನ್ನ ಚಾಲನಾ ಪರವಾನಗಿ ಇರುವುದಿಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿದ್ದೆನು. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ಕೊಟ್ಟಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಅಪಘಾತದಲ್ಲಿ ನನ್ನ ಜೊತೆಯಲ್ಲಿದ್ದ ಅರ್ಜುನ್‌ರವರಿಗೆ ಪೆಟ್ಟಾಗಿತ್ತು. ಅವರೂ ಸಹ ನಾನು ಚಿಕಿತ್ಸೆ ಪಡೆದುಕೊಂಡ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಅಪಘಾತದ ಸಮಯದಲ್ಲಿ ನಾನು ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡುತ್ತಾ ಹೋಗಿ ಎದುರುಗಡೆಯಿಂದ ಬರುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದೆ ಎನ್ನುವುದು ಸರಿಯಲ್ಲ. ಅಪಘಾತದಲ್ಲಿ ನಮ್ಮ ಬೈಕಿನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿತ್ತು ಎನ್ನುವುದು ನಿಜ. ನನಗೆ ಇದುವರೆವಿಗೂ ಕೆ.ಜಿ.ಐ.ಡಿ ಯಿಂದ ಪರಿಹಾರ ಬಂದಿರುವುದಿಲ್ಲ. ಈ

ಬಗ್ಗೆ ನಾನು ಅರ್ಜಿ ಸಲ್ಲಿಸಿಲ್ಲ. ಅಪಘಾತವು ನನ್ನ ಅಜಾಗರೂಕತೆಯಿಂದ ಸಂಭವಿಸಿದ್ದು, ಕಾರಿನ ಚಾಲಕನ ತಪ್ಪಿನಿಂದಲ್ಲ ಎನ್ನುವುದು ಸರಿಯಲ್ಲ.

6. ನನಗೆ ಚಿಕಿತ್ಸೆ ನೀಡಿದ ವೈದ್ಯರು ಯಾರು ಎನ್ನುವುದು ನನಗೆ ನೆನಪಿಲ್ಲ. ನಾನು ಬಿ.ಜಿ.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಚಿಕಿತ್ಸೆ ಪಡೆದುಕೊಂಡಿಲ್ಲ. ನಾನು ದಿನಾಂಕ 26.08.2019 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರದಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದು ಸಾಬೀತುಪಡಿಸುವ ಸಂಬಂಧ ದಾಖಲೆಗಳಿದ್ದು ಈಗ ಹಾಳಾಗಿವೆ. ನನಗೆ ಇಂತಹ ಚಿಕಿತ್ಸೆ ಪಡೆದುಕೊಳ್ಳಿ ಎಂದು ವೈದ್ಯರು ಸಲಹಾ ಚೀಟಿಗಳನ್ನು ನೀಡಿದ್ದರು. ಸದರಿ ದಾಖಲೆಗಳು ನಮ್ಮ ಮನೆಯಲ್ಲಿವೆ. ನನಗೆ ಚಿಕಿತ್ಸೆ ನೀಡಿದ ವೈದ್ಯರು ನಾನು ಇಂತಹ ಕೆಲಸಗಳನ್ನು ಇಷ್ಟು ದಿನ ಮಾಡಲು ಸಾಧ್ಯವಿಲ್ಲ ಎನ್ನುವ ಬಗ್ಗೆ ಯಾವುದೇ ಪ್ರಮಾಣಪತ್ರವನ್ನು ನೀಡಿರುವುದಿಲ್ಲ. ನಾನು ಮೊದಲಿಗಿಂತಲೂ ಈಗ ಹೆಚ್ಚಿನ ವೇತನ ಪಡೆಯುತ್ತಿದ್ದು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಪಘಾತದಿಂದ ನನ್ನ ವೇತನದಲ್ಲಿ ಯಾವುದೇ ವ್ಯತ್ಯಾಸವಾಗದೇ ಇರುವುದರಿಂದ ನನ್ನ ಬ್ಯಾಂಕ್ ದಾಖಲೆಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ನನ್ನ ಚಿಕಿತ್ಸೆಗೆ ತಗುಲಪಿದ ವೆಚ್ಚವನ್ನು ಈಗಾಗಲೇ ನಮ್ಮ ಇಲಾಖೆಯ ವತಿಯಿಂದ ಭರಿಸಲಾಗಿದ್ದು, ನಿಪಿ-8 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ.

7. ನನ್ನ ಪ್ರಮಾಣಪತ್ರದ 7 ನೇ ಖಂಡಿಕೆಯಲ್ಲಿ ಕಾಣಿಸಿರುವ

ವಿಚಾರಗಳು ಸುಳ್ಳು ಎನ್ನುವುದು ಸರಿಯಲ್ಲ ಹಾಗೂ ನನ್ನ ಪ್ರಮಾಣಪತ್ರದ 8 ನೇ ಖಂಡಿಕೆಯಲ್ಲಿ ಹೇಳಿರುವಂತೆ ನನಗೆ ಯಾವುದೇ ತೊಂದರೆಗಳಿಲ್ಲ ಎನ್ನುವುದು ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ರೀತಿಯ ಮಾನಸಿಕ, ದೈಹಿಕ ಹಾಗೂ ಆರ್ಥಿಕ ಸಮಸ್ಯೆಗಳಾಗಿಲ್ಲ ಎನ್ನುವುದು ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.